ಭಾಗ–2

(ಅನುಬಂಧ–1)

ಶ್ರೀ ಸಿ.ಬಿ. ಕೃಷ್ಣ ಬೈರೇಗೌಡ : ಮಾನ್ಯ ಅಧ್ಯಕ್ಷರೆ, Written questionsಗೆ reply ಬಂದಿಲ್ಲ.

ಅಧ್ಯಕ್ಷರು : ಯಾವುದು ?

ಶ್ರೀ ಸಿ.ಬಿ. ಕೃಷ್ಣ ಬೈರೇಗೌಡ : Unstanred Questionsದು.

ಶ್ರೀ ಸಿದ್ದರಾಮಯ್ಯ : ಇಲ್ಲಾ ನಿಮ್ಮಿಂದ ಉತ್ತರವೇ ಬಂದಿಲ್ಲವೆಂದು ಮಾನ್ಯ ಸದಸ್ಯರು ಕೇಳುತ್ತಿದ್ದಾರೆ.

ಶ್ರೀ ಕೆ. ಸುರೇಶ್ ಗೌಡ : ನಿನ್ನೆದು ಮತ್ತು ಯಾವುದಕ್ಕೂ ಸಹ ಉತ್ತರ ಬಂದಿಲ್ಲ.

ಶ್ರೀ ಎಸ್. ಸುರೇಶ್ ಕುಮಾರ್ : ಈಗ ಮಾಡುತ್ತಿದ್ದಾರೆ.

ಅಧ್ಯಕ್ಷರು : ಈಗ ಕೊಡುತ್ತಿದ್ದಾರೆ. ಈಗ ಚುನಾವಣಾ ಪ್ರಸ್ತಾವ.

2. ಚುನಾವಣಾ ಪ್ರಸ್ತಾವ:

ಶ್ರೀ ಎಸ್. ಸುರೇಶ್ ಕುಮಾರ್ (ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ, ನಗರಾಭಿವೃದ್ಧಿ ಸಚಿವರು) : ಮಾನ್ಯ ಸಭಾಧ್ಯಕ್ಷರೆ, 1994ನೇ ಇಸವಿಯ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 21ನೇ ಕಲಂನ ಮೇರೆಗೆ ಅವಶ್ಯಪಡಿಸುವಂತೆ ಏಕಲ ಸಂಕ್ರಮಣೀಯ ಮತದ ಮೂಲಕ ಅನುಪಾತ ಪ್ರಾತಿನಿಧ್ಯದ ನೀತಿಗೆ ಅನುಸಾರವಾಗಿ ಈ ಸಭೆಯ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಸೆನೆಟ್‌ಗೆ ಮೂರು ಜನ ಸದಸ್ಯರನ್ನು ಚುನಾಯಿಸಬೇಕೆಂದು ಸೂಚಿಸುತ್ತೇನೆ.

ಅಧ್ಯಕ್ಷರು : ಮಂಡಿಸಲಾಯಿತು. ಈಗ ವರದಿಯನ್ನೊಪ್ಪಿಸುವುದು.

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, ಒಂದು ನಿಮಿಷ. ನಾಲ್ಕು ಪ್ರಶ್ನೆಗಳನ್ನು ಕೇಳಿರುವ ಪೈಕಿ ಎರಡು ಪ್ರಶ್ನೆಗಳಿಗೆ ಉತ್ತರ ಬಂದಿದೆ. ಇನ್ನುಳಿದ ಎರಡು ಪ್ರಶ್ನೆಗಳಿಗೆ ಉತ್ತರವನ್ನು ಕಳುಹಿಸಿಲ್ಲ. ಲಿಖಿತ ಮೂಲಕ ಉತ್ತರಿಸುವಂತಹ ಪ್ರಶ್ನೆಗಳಿಗೂ ಸಹ ಉತ್ತರವನ್ನು ಕಳುಹಿಸುವುದಿಲ್ಲವೆಂದರೆ ಹೇಗೆ? ಏತಕ್ಕಾಗಿ ಹೀಗೆ ಆಗುತ್ತದೆ?

ಶ್ರೀ ಎಸ್. ಸುರೇಶ್ ಕುಮಾರ್ : ಮಾನ್ಯ ಅಧ್ಯಕ್ಷರೆ, ನಾನು ಓದುವಾಗಲೇ ಹೇಳಿದ್ದೇನೆ. 115 ಪ್ರಶ್ನೆಗಳ ಪೈಕಿ 75 ಪ್ರಶ್ನೆಗಳಿಗೆ ಈಗ ಉತ್ತರವನ್ನು ಒದಗಿಸುತ್ತಿದ್ದೇನೆ. ಈಗ ಅವರಿಗೆ ಉತ್ತರವನ್ನು ಕಳುಹಿಸುತ್ತಿದ್ದೇನೆ.

ಶ್ರೀ ಸಿದ್ದರಾಮಯ್ಯ : ಯಾವಾಗ?

ಶ್ರೀ ಎಸ್. ಸುರೇಶ್ ಕುಮಾರ್ : ಉತ್ತರಗಳು ದೊರಕಿದ ತಕ್ಷಣ ಕಳುಹಿಸಿಕೊಡುತ್ತೇವೆ. ಒಂದು ವಾರದಲ್ಲಿ ಅಥವಾ 10 ದಿವಸದಲ್ಲಿ ಉತ್ತರವನ್ನು ಕಳುಹಿಸುತ್ತೇವೆ.

ಶ್ರೀ ಸಿದ್ದರಾಮಯ್ಯ : ಈ ಅಧಿವೇಶನ ಮುಗಿಯುವುದರೊಳಗಡೆ ಕಳುಹಿಸಿಕೊಡಿ.

ಶ್ರೀ ಎಸ್. ಸುರೇಶ್ ಕುಮಾರ್ : ನಾವು ಖಂಡಿತವಾಗಿಯೂ ಪ್ರಯತ್ನ ಮಾಡುತ್ತೇವೆ.

ಅಧ್ಯಕ್ಷರು : ಈಗ 115 ಪ್ರಶ್ನೆಗಳಲ್ಲಿ 75 ಪ್ರಶ್ನೆಗಳಿಗೆ ಉತ್ತರವನ್ನು ಕೊಟ್ಟಿದ್ದೀರಿ. ಉಳಿದಿದ್ದು ಯಾವಾಗ ಕೊಡುತ್ತೀರಿ?

ಶ್ರೀ ಸಿ.ಬಿ. ಕೃಷ್ಣ ಬೈರೇಗೌಡ : ಪ್ರತಿನಿತ್ಯವು ಇದೇ ಆಗುತ್ತಿದೆ.

ಶ್ರೀ ಎಸ್. ಸುರೇಶ್ ಕುಮಾರ್ : ಸದನವು ಪ್ರಾರಂಭವಾಗಿರುವ ಬಗ್ಗೆ ತಮಗೆ ಗೊತ್ತಿದೆ. ಇದ್ದ ಅವಧಿಯೂ ಕಡಿಮೆ ಇದೆ. ಎಷ್ಟು ಪ್ರಶ್ನೆಗಳಿಗೆ ಉತ್ತರ ಬಂದಿದೆಯೋ ಕೊಡುತ್ತೇವೆ. ಎಲ್ಲಾ ಪ್ರಶ್ನೆಗಳಿಗೂ ಕೂಡ ಉತ್ತರವನ್ನು ಸಂಬಂಧಪಟ್ಟ ಸದಸ್ಯರುಗಳಿಗೆ ಕಳುಹಿಸಿಕೊಡುತ್ತೇವೆ.

ಶ್ರೀ ಸಿ.ಬಿ. ಕೃಷ್ಣ ಬೈರೇಗೌಡ : ದಿನೇ ದಿನೇ ಇದೇ ರೀತಿ ಆಗುತ್ತಿದೆ. ಇವರಿಗೆ ಯಾರು ಹೇಳುವವರು ಮತ್ತು ಕೇಳುವವರು ಇಲ್ಲ.

ಡಾ॥ ಹೆಚ್.ಸಿ. ಮಹದೇವಪ್ಪ : ಮಾನ್ಯ ಅಧ್ಯಕ್ಷರೆ, ಮಾನ್ಯ Law and Parliamentary Affairs Minister ಅವರು ಯಾವ ಯಾವ ಪ್ರಶ್ನೆಗಳಿಗೆ ಉತ್ತರವನ್ನು ಕೊಟ್ಟಿಲ್ಲ. ಅದರ ಬಗ್ಗೆ ಒಂದು ಲಿಸ್ಟ್ ಅನ್ನು ಮಾಡಿ. ಇಷ್ಟಕ್ಕೆ ಮಾತ್ರ ಉತ್ತರವನ್ನು ಕೊಟ್ಟಿದ್ದೇವೆ. ಇಷ್ಟಕ್ಕೆ ಕೊಡುತ್ತೇವೆಂದು ಸಹ ಹೇಳಬೇಕು. ನನ್ನದು 5 ಪ್ರಶ್ನೆಗಳು ಇದೆ. ನನಗೆ ಮೊನ್ನೆ ಕೊಟ್ಟಿದ್ದಾರೆ. ನಿನ್ನೆ ಕೊಟ್ಟಿರುವುದನ್ನು ಸಹ ನಾನು ಕೇಳಿದ್ದೇನೆ. ಮುಖ್ಯವಾಗಿರುವ

ಪ್ರಶ್ನೆಯದೆಲ್ಲಾ ನೀವು written answer ಗೆ ಹಾಕಿಬಿಟ್ಟಿದ್ದೀರಿ. ನಮಗೆ ಏನೂ information ಇಲ್ಲದೇ ಇದ್ದರೆ ಮುಂದೆ ಮಾತನಾಡುವುದಕ್ಕೆ ಕಷ್ಟವಾಗುತ್ತದೆ. ಮತ್ತು ರೆಕಾರ್ಡ್ ಮಾಡುವುದಕ್ಕೆ ಅನಾನುಕೂಲವಾಗುತ್ತದೆ. Information ಕೊಟ್ಟಿದ್ದರೆ ಕೊಟ್ಟಿದ್ದೇವೆ ಅಥವಾ ಕೊಟ್ಟಿಲ್ಲ ಎಂದು ಹೇಳಬೇಕಾಗುತ್ತದೆ.

ಅಧ್ಯಕ್ಷರು : ಮಾನ್ಯ ಸಚಿವರು ಕೊಡುತ್ತೇವೆಂದು ಹೇಳಿದ್ದಾರಲ್ಲಾ, ಮಾನ್ಯ ಸಚಿವರೆ, ಎಲ್ಲದಕ್ಕೂ ಉತ್ತರವನ್ನು ಕೊಡಿಸಿ.

ಶ್ರೀ ಸಿ.ಬಿ. ಕೃಷ್ಣ ಬೈರೇಗೌಡ : ಕಷ್ಟಕರವಾದಂತಹ ವಿಚಾರ ಬಂದಾಗ ಅದಕ್ಕೆ ಉತ್ತರವೇ ಕೊಡಲಿಲ್ಲವೆಂದರೆ ಅಲ್ಲಿಗೆ ವಿಚಾರವನ್ನೇ ಮುಚ್ಚಿ ಹಾಕಿದಂತಾಗುತ್ತದೆ. ಏನಾದರೂ Controversial topic ಇದ್ದರೆ ಅದಕ್ಕೆ reply ಕೊಡಲಿಲ್ಲವೆಂದರೆ ಅದು ಕ್ಲೋಸ್ ಆಗುತ್ತದೆ. ನೀವು ಸದನಕ್ಕೆ ಉತ್ತರವನ್ನು ಕೊಡುವುದಕ್ಕಾಗಲಿಲ್ಲವೆಂದರೆ ಹೇಳಿಬಿಡಿ. ಮಾಹಿತಿ ಹಕ್ಕು ಕಾಯಿದೆ ಒಂದೇ ನಿಮಗೆ ಇರುವ ಮಾರ್ಗ ನಿಮಗೆ ಸದನದ ಸದಸ್ಯರಾಗಿ ಬೇರೆ ಏನೂ ಗೌರವವಿಲ್ಲ. ಅವಕಾಶ ಇಲ್ಲ ಎಂದು ಹೇಳುತ್ತೇನೆ. ಮಾನ್ಯ ಸಚಿವರೆ, ನಾನು ಹೇಳುವುದನ್ನು ತಾವು ದಯಮಾಡಿ ಕೇಳಬೇಕು. ಇಲ್ಲಿ ಏನಾದರೂ ಹಗರಣಗಳು ಮತ್ತೇನಾದರೂ ಇಲ್ಲಿಗೆ ಪ್ರಸ್ತಾಪಿಸಬೇಕೆಂದು ಹೇಳಿದಾಗ ಈ ತರಹ ಉತ್ತರವನ್ನು ಕೊಡಿಲಿಲ್ಲವೆಂದರೆ ಅದನ್ನು ನಾವು ರೈಸ್ ಮಾಡುವ ಹಾಗಿಲ್ಲ. ವಿಚಾರ ಏನೆಂಬುದರ ಬಗ್ಗೆ ನಾನು ಶೂನ್ಯವೇಳೆಯಲ್ಲಿ ಸಮಯವನ್ನು ಕೊಟ್ಟರೆ ಪ್ರಸ್ತಾಪ ಮಾಡುತ್ತೇನೆ.ಆದರೆ ಈ ರೀತಿ ಉತ್ತರ ಕೊಡದೆ ನಮ್ಮ ಹಕ್ಕನ್ನು ಈ ತರಹ ಚ್ಯುತಿ ಮಾಡುವುದು ಸದನಕ್ಕೆ ಗೌರವವಲ್ಲ. ಇದು ಎಲ್ಲಾ ಸದಸ್ಯರಿಗೂ ಅಗೌರವ ತೋರಿಸಿದಂತಾಗುತ್ತದೆ. ಇಲ್ಲಿ ಎಲ್ಲಾ ಸದಸ್ಯರು ಏನು ಹೇಳುತ್ತಾರೆಂದರೆ, ಇದು ಒಂದು ದಿನ ಮಾತ್ರವಲ್ಲ ಪ್ರತಿದಿನವು ಇದೇ ರೀತಿಯಾಗುತ್ತದೆ. ನಾವು ಸದನದ ಬಗ್ಗೆ ಗೌರವ ಇರುವಂತಹ ಮಂತ್ರಿಗಳಾಗಿದ್ದೀರಿ. ಈ ತರಹ ಸದನಕ್ಕೆ ಅಗೌರವ ಆಗುತ್ತಿದ್ದರೆ ತಾವು ದಯವಿಟ್ಟು ಇದನ್ನು ಕೇವಲ ಸರ್ಕಾರ ಮತ್ತು ವಿಪಕ್ಷ ಎಂದು ನೋಡದೆ ಸದನದ ಗೌರವವನ್ನು ಉಳಿಸುವಂತಹ ಕೆಲಸವನ್ನು ದಯವಿಟ್ಟು ಮಾಡಬೇಕು.

ಶ್ರೀ ಎಸ್. ಸುರೇಶ್ ಕುಮಾರ್ (ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ, ನಗರಾಭಿವೃದ್ಧಿ ಸಚಿವರು) : ಮಾನ್ಯ ಸಭಾಧ್ಯಕ್ಷರೆ, ಈ ಸದನದ ಸದಸ್ಯರು ಕಳುಹಿಸಿರುವಂತಹ ಪ್ರತಿ ಪ್ರಶ್ನೆಗೂ ಉತ್ತರ ಕೊಡುವುದು ಸರ್ಕಾರದ ಜವಾಬ್ದಾರಿ. ಕೆಲವು ಸಲ ವಿಳಂಬವಾದರೂ ಕೂಡ ಅದನ್ನು ಕಳುಹಿಸುವಂತಹ ಕೆಲಸವನ್ನು ನಾವು ಮಾಡುತ್ತೇವೆ. ಎಲ್ಲಾ ಪ್ರಶ್ನೆಗಳಿಗೆ ಉತ್ತರವನ್ನು ಕೊಡಿಸುವಂತಹ ಕೆಲಸವನ್ನು ಬೇರೆ ಬೇರೆ ಇಲಾಖೆಗಳಿಂದ ನಾವು ಮಾಡಿಸಿಕೊಡುತ್ತೇವೆ.

ಅಧ್ಯಕ್ಷರು : ಆಯಿತು, ಈಗ ಇದನ್ನು ಮುಕ್ತಾಯ ಮಾಡೋಣ. ಈಗ ವರದಿಯನ್ನೊಪಿಸುವುದು.

3. ವರದಿಯನ್ನೊಪ್ಪಿಸುವುದು:

ಶ್ರೀ ಅಭಯ ಪಾಟೀಲ್ (ಅಧ್ಯಕ್ಷರು, ಅಂದಾಜುಗಳ ಸಮಿತಿ) : ಮಾನ್ಯ ಅಧ್ಯಕ್ಷರೆ 2011–12ನೇ ಸಾಲಿನ ಅಂದಾಜು ಸಮಿತಿಯ ಮೊದಲನೇ ವರದಿಯನ್ನೊಪ್ಪಿಸುತ್ತೇನೆ.

ಅಧ್ಯಕ್ಷರು : ಮಂಡಿಸಲಾಯಿತು.

ಅಧ್ಯಕ್ಷರು : ಶ್ರೀ ಗೂಳಿಹಟ್ಟಿ ಡಿ. ಶೇಖರ್‌ರವರು ಸದನದಲ್ಲಿ ಮಂಡಿಸಲಾಗಿರುವ 2011–12ನೇ ಸಾಲಿನ ಹಕ್ಕು ಬಾಧ್ಯತಾ ಸಮಿತಿಯ ಐದನೇ ವರದಿಯನ್ನು ಪರ್ಯಾಲೋಚಿಸಬೇಕೆಂದು ಸೂಚಿಸುವುದು.

4. 2011–12ನೇ ಸಾಲಿನ ಹಕ್ಕು ಬಾಧ್ಯತಾ ಸಮಿತಿಯ ವರದಿಯ ಪರ್ಯಾಲೋಚನೆ (ಬೆಳಗಾವಿಯ ತರುಣ್ ಭಾರತ್ ಪತ್ರಿಕಾ ವರದಿಯಿಂದ ಹಕ್ಕುಚ್ಯುತಿಯಾಗಿರುವ ಬಗ್ಗೆ)

ಶ್ರೀ ಗೂಳಿಹಟ್ಟಿ ಡಿ. ಶೇಖರ್ (ಹೊಸದುರ್ಗ) : ಮಾನ್ಯ ಅಧ್ಯಕ್ಷರೆ, 2011–12ನೇ ಸಾಲಿನ ಹಕ್ಕುಬಾಧ್ಯತಾ ಸಮಿತಿಯ ಐದನೇ ವರದಿಯನ್ನು ಪರ್ಯಾಲೋಚಿಸಲು ಸೂಚಿಸಬೇಕೆಂದು ಮಾನ್ಯ ಅಧ್ಯಕ್ಷರಲ್ಲಿ ಮನವಿಯನ್ನು ಮಾಡುತ್ತೇನೆ. ಶಾಸಕರಾದ ಶ್ರೀ ಅಭಯ ಪಾಟೀಲ್ ಮತ್ತು ಶ್ರೀ ಶ್ಯಾಮಾ